ಮೂಲ: ಫೆರಿಟ್ ಒರ್ಹಾನ್ ಪಾಮುಕ್

**ಕನ್ನಡಕ್ಕೆ: ಓ.ಎಲ್. ನಾಗಭೂಷಣ ಸ್ವಾಮಿ**

# ನಮ್ಮಪ್ಪನ ಸೂಟ್‌ಕೇಸು

ನಮ್ಮಪ್ಪ ಸಾಯುವುದಕ್ಕೆ ಎರಡು ವರ್ಷ ಮೊದಲು ನನಗೊಂದು ಪುಟ್ಟ ಸೂಟ್‌ಕೇಸು ಕೊಟ್ಟರು. ಅದರಲ್ಲಿ ಅಪ್ಪನ ಬರವಣಿಗೆ, ಹಸ್ತಪ್ರತಿ, ನೋಟುಬುಕ್ಕುಗಳು ಇದ್ದವು. ತನ್ನ ಮಾಮೂಲಾದ ಲಘು, ಜೋಕಿನ ದನಿಯಲ್ಲಿ ಮಾತಾಡುತ್ತ ತಾವು ಹೋದಮೇಲೆ, ಅಂದರೆ ತೀರಿಕೊಂಡ ಮೇಲೆ, ಇವನ್ನೆಲ್ಲ ಓದಬೇಕು ಅಂದರು.

'ನಾನು ಹೋದಮೇಲೆ ಒಂದು ಸಾರಿ ಸುಮ್ಮನೆ ನೋಡು. ನೀನು ಬಳಸಲು ಆಗುವಂಥದ್ದು ಇದರಲ್ಲಿ ಏನಾದರೂ ಇದ್ದರೆ, ನಾನು ಹೋದನಂತರ ಅದನ್ನು ಆಯ್ದು ಪ್ರಕಟಮಾಡು,' ಅಂದರು. ಮುಖದಲ್ಲಿ ಸ್ವಲ್ಪ ಕಸಿವಿಸಿ ಇದ್ದ ಹಾಗಿತ್ತು.

ನಮ್ಮ ಸ್ಟಡಿ ರೂಮಿನಲ್ಲಿದ್ದೆವು. ಸುತ್ತಲೂ ಪುಸ್ತಕ ಇದ್ದವು. ನೋವಿನ ಹೊರೆ ಇಳಿಸಲು ಹಾತೊರೆಯುವವರ ಹಾಗೆ ನಮ್ಮಪ್ಪ ಸೂಟ್‌ಕೇಸು ಇಡಲು ಜಾಗ ಹುಡುಕುತ್ತಿದ್ದರು.

ಕೊನೆಗೆ ಎದ್ದು ಕಾಣದಂಥ ಮೂಲೆಯಲ್ಲಿ ಅದನ್ನು ಇಟ್ಟರು. ಆ ಕ್ಷಣ ನಾವಿಬ್ಬರೂ ಮರೆಯಲಾಗಂಥ ಸಿಗ್ಗಿನ ಕ್ಷಣ. ಆ ಕ್ಷಣ ಕಳೆಯುತ್ತಿದ್ದ ಹಾಗೇ ನಾವು ಮತ್ತೆ ನಮ್ಮ ನಮ್ಮ ಮಾಮೂಲಿ ಪಾತ್ರಗಳಾದೆವು, ಲಘುವಾಗಿ ಮಾತಾಡುತ್ತ, ಜೋಕು ಹೇಳುತ್ತ, ಪರಪ್ಪರ ಅಣಕಿಸುತ್ತ ಆರಾಮವಾದೆವು. ಯಾವಾಗಲೂ ಮಾಡುವ ಹಾಗೆ ದಿನ ದಿನದ ಬದುಕಿನ ಕ್ಷುಲ್ಲಕ ಸಂಗತಿಗಳ ಬಗ್ಗೆ, ಟರ್ಕಿಯ ಎಂದೂ ಮುಗಿಯದ ರಾಜಕೀಯ ಸಮಸ್ಯೆಗಳ ಬಗ್ಗೆ, ಸಾಮಾನ್ಯವಾಗಿ ವಿಫಲವೇ ಆಗುತ್ತಿದ್ದ ನಮ್ಮಪ್ಪನ ಬ್ಯುಸಿನೆಸ್ ಸಾಹಸಗಳ ಬಗ್ಗೆ ಮಾತಾಡಿದೆವು. ಇಬ್ಬರೂ ಅಂಥ ದುಃಖ ಫೀಲು ಮಾಡಲಿಲ್ಲ.

ನಮ್ಮಪ್ಪ ಹೋದಮೇಲೆ ಎಷ್ಟೋ ದಿನ ಆ ಸೂಟ್‌ಕೇಸು ಮುಂದೆ ಅದನ್ನು ದಾಟಿಕೊಂಡು ಓಡಾಡಿದ್ದೇನೆ. ಒಂದು ಸಾರಿಯೂ ಅದನ್ನು ಮುಟ್ಟಲಿಲ್ಲ. ಕಪ್ಪು ಚರ್ಮದ ಪುಟ್ಟ ಸೂಟ್‌ಕೇಸು, ಅದರ ಬೀಗ, ದುಂಡು ಮೂಲೆ ಎಲ್ಲ ತೀರ